## 118. ಡಿಕೆಶಿ ಪದಗ್ರಹಣಕ್ಕೆ ಭರ್ಜರಿ ಡಿಜಿಟಲ್ ತಾಲೀಮು

ರಾಜ್ಯದ ಮೂಲೆ ಮೂಲೆಯ ಕಾಂಗ್ರೆಸ್ ಕಾರ್ಯಕರ್ತರನ್ನು ಹೊಸ ಭರವಸೆ, ಉತ್ಸಾಹದೊಂದಿಗೆ ಹುರುಪುಗೊಳಿಸಿ, ತಳಮಟ್ಟದಿಂದ ಪಕ್ಷ ಸಂಘಟಿಸುವ ಪ್ರಯತ್ನಕ್ಕೆ ಮುನ್ನುಡಿ ಬರೆಯುವ ಮಹತ್ವಾಕಾಂಕ್ಷೆಯೊಂದಿಗೆ ಕೆಪಿಸಿಸಿ ನೂತನ ಅಧ್ಯಕ್ಷ ಹಾಗೂ ಮೂವರು ಕಾರ್ಯಾಧ್ಯಕ್ಷರ ಜುಲೈ 2ರ ಪದಗ್ರಹಣ ಸಮಾರಂಭಕ್ಕೆ ಪೂರ್ವತಾಲೀಮು ಪೂರ್ಣಗೊಂಡಿದೆ.

ಕೊರೊನಾ ಸಂಕಷ್ಟ ಕಾಲದಲ್ಲೂ ಕನಿಷ್ಠ 20 ಲಕ್ಷ ಜನರು ಪಾಲ್ಗೊಳ್ಳಲು ಸಾಧ್ಯವಾಗುವಂತೆ ತಂತ್ರಜ್ಞಾನದ ಸದ್ಬಳಕೆಗೆ ಕಾಂಗ್ರೆಸ್ ಕಾರ್ಯಕರ್ತರನ್ನು ಅಣಿಗೊಳಿಸಿ, ಗುಂಪುಗಾರಿಕೆ ಮುಕ್ತವಾಗಿ ಹಿರಿಯ, ಕಿರಿಯರೆನ್ನದೆ ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯುವ ಮಹದಾಶಯದೊಂದಿಗೆ ನೂತನ ಸಾರಥಿ ಪಟ್ಟಾಭಿಷೇಕದ ಸಿದ್ಧತೆ ಪೂರ್ಣಗೊಂಡಿದೆ.

ರಾಜ್ಯದ 7,831 ಕಡೆಗಳಲ್ಲಿ ಏಕಕಾಲಕ್ಕೆ ಕನಿಷ್ಠ 20 ಲಕ್ಷ ಮಂದಿ ಪದಗ್ರಹಣ ಸಮಾರಂಭಕ್ಕೆ ಸಾಕ್ಷಿಯಾಗುವಂತೆ ಅಭೂತಪೂರ್ವವಾಗಿ ಕಾರ್ಯಕ್ರಮ ಸಂಘಟಿಸಲಾಗುತ್ತಿದೆ. ಕೆಪಿಸಿಸಿ ನೂತನ ಕಟ್ಟಡದ ಸಭಾಂಗಣದಲ್ಲಿ ಡಿ.ಕೆ.ಶಿವಕುಮಾರ್, ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಹಿರಿಯ ನಾಯಕರು, ವಿಧಾನ ಸಭಾ ಕ್ಷೇತ್ರವಾರು ಪಕ್ಷದ ವೀಕ್ಷಕರು ಮತ್ತಿತರ ನಾಯಕರು ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡರು. ಜುಲೈ.2ರ ಸಭೆಯ ಈ ರಿಹರ್ಸಲ್ ಸಭೆಯೇ ಸ್ಪಷ್ಟ ಸಂದೇಶ ನೀಡಿತು.

ಮುಂದಿನ ವಿಧಾನ ಸಭೆ ಚುನಾವಣೆಯಲ್ಲಿ ರಾಜ್ಯದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವ ಗುರಿಗಾಗಿ ಎಲ್ಲ ಶಕ್ತಿಯನ್ನು ಒಟ್ಟುಗೂಡಿಸಿಕೊಂಡು ಅಖಾಡಕ್ಕಿಳಿಯುವ ಸಂದೇಶವೊಂದು ಈ ಸಭೆ ಮೂಲಕ ರವಾನೆಯಾಯಿತು. ಸೇವಾದಳದಿಂದ ಮೊದಲ್ಗೊಂಡು ವಿದ್ಯಾರ್ಥಿ ಕಾಂಗ್ರೆಸ್, ಮಹಿಳಾ ಕಾಂಗ್ರೆಸ್ ಎಲ್ಲಾ ಮುಂಚೂಣಿ ಘಟಕಗಳು ಹಾಗೂ ಮುಖಂಡರು 'ಪದಗ್ರಹಣ'ದ ವೇದಿಕೆಯಲ್ಲಿ ಒಟ್ಟುಗೂಡುತ್ತಿದ್ದಾರೆ.

**ವಿಳಂಬವಾದರೂ ಅಭೂತಪೂರ್ವ:** ಕಾಂಗ್ರೆಸ್ ಕಾರ್ಯಕರ್ತ ಪಡೆಯಲ್ಲಿ ಹೊಸ ಹುಮ್ಮಸ್ಸು ತುಂಬುವ ಅನಿವಾರ್ಯತೆಗಾಗಿ ಮೂರು ಬಾರಿ ಮುಂದೂಡಿಕೆಯಾಗಿದ್ದರೂ 'ಪದಗ್ರಹಣ' ಸಮಾರಂಭ ಅಭೂತಪೂರ್ವ ರೀತಿ ನಡೆಯಲು ಸಿದ್ಧತೆಯಾಗಿದೆ. "ನೂತನ ಸಾರಥಿ ವೈಭವೀಕರಣವಲ್ಲ, ಕಾರ್ಯಕರ್ತರು ಮತ್ತು ಮುಖಂಡರಲ್ಲಿ ಹುಮ್ಮಸ್ಸು ತುಂಬಲು ಈ ಕಾರ್ಯಕ್ರಮವನ್ನು ಸಂಘಟಿಸಲಾಗುತ್ತಿದೆ," ಎಂದು ಸಿದ್ಧತಾ ಸಭೆಯಲ್ಲಿ ಸಿದ್ದರಾಮಯ್ಯ ಹೇಳಿದರು.

ಸಂಸದ ಡಿ.ಕೆ.ಸುರೇಶ್ ಅವರು ತಂತ್ರಜ್ಞಾನ ನಿರ್ವಹಣೆಯ ಉಸ್ತುವಾರಿ ವಹಿಸಿದ್ದರೆ, ಬಿ.ಎಲ್.ಶಂಕರ್ ಮತ್ತಿತರ ರಾಜ್ಯ ಕಾಂಗ್ರೆಸ್ 'ಥಿಂಕ್ ಟ್ಯಾಂಕ್' ಬಳಗವು ಕಾರ್ಯಕ್ರಮದ ರೂಪುರೇಷೆ ಸಿದ್ಧಮಾಡಿದೆ. ತಳಮಟ್ಟದಿಂದ ಪಕ್ಷ ಸಂಘಟನೆ ಶುರು ಮಾಡಲು ಈ ಸಮಾರಂಭವನ್ನು ಆರಂಭಿಕ ವೇದಿಕೆಯಾಗಿ ಬಳಸಲಾಗುತ್ತಿದೆ.

ಸಭೆಗೆ ಮಾರ್ಗದರ್ಶನ ಮಾಡಿದ ಹಿರಿಯ ಮುಖಂಡ ಬಿ.ಎಲ್.ಶಂಕರ್, "ಈ ಕಾರ್ಯಕ್ರಮದ ಯಶಸ್ಸು ಮುಂದಿನ ದಿನಗಳಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಪ್ರಮುಖವಾಗಲಿದೆ," ಎಂದು ಹೇಳಿದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:24.06.2020